# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 30-07-2024ರ ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆ"ಯ ನಡವಳಿ.**

**<u>ಉಪಸ್ಥಿತರು:</u>**

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು | – ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.<br>ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು,<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | – ಸದಸ್ಯರು |
| 3. | ಪ್ರೊ. ಸೊನರ್ ನಂದಪ್ಪ | – ಸದಸ್ಯರು |
| 4. | ಡಾ. ಟಿ.ಆರ್. ಚಂದ್ರಶೇಖರ್ | – ಸದಸ್ಯರು |
| 5. | ಶ್ರೀ ಕೆ.ಗೋಕುಲ್ ಗೋವರ್ಧನ್ | – ಸದಸ್ಯರು |
| 6. | ಡಾ. ಅಂತೋನಿ ಪೌಲ್ ರಾಜ್ ಸಿ. | – ಸದಸ್ಯರು |
| 7. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | – ಸದಸ್ಯರು |
| 8. | ಡಾ. ಮುಜ್ಜೀದ ಬಾನು | – ಸದಸ್ಯರು |
| 9. | ಶ್ರೀ ಮಹದೇಶು | – ಸದಸ್ಯರು |
| 10. | ಶ್ರೀ ನಾಗರಾಜು ಸಿ. | – ಸದಸ್ಯರು |
| 11. | ಡಾ. ಬಸವರಾಜು ಸಿ. | – ಸದಸ್ಯರು |
| 12. | ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ | – ಸದಸ್ಯರು |
| 13. | ಡಾ. ಶಿಲ್ಪ ಜೆ. | – ಸದಸ್ಯರು |
| 14. | ಶ್ರೀ ನಟರಾಜು ಹೆಚ್.ಎಸ್. | – ಸದಸ್ಯರು |
| 15. | ಡಾ. ನಾಗರಾಜ, ಕುಲಸಚಿವ (ಪರೀಕ್ಷಾಂಗ) | – ಸದಸ್ಯರು |
| 16. | ಶ್ರೀಮತಿ ವಿ.ಆರ್. ಶೈಲಜ, ಕೆ.ಎ.ಎಸ್., ಕುಲಸಚಿವರು | – ಸದಸ್ಯ ಕಾರ್ಯದರ್ಶಿ |
| 17. | ಶ್ರೀಮತಿ ಕೆ.ಎಸ್, ರೇಖಾ ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿ | – ವಿಶೇಷ ಆಹ್ವಾನಿತರು |

**<u>ಅನುಪಸ್ಥಿತರು</u>**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
2. ಡಾ. ಗಣೇಶ್ ಕೆ.
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಸಚಿವರು ಸಿಂಡಿಕೇಟ್ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಮಾನ್ಯ ಕುಲಪತಿಗಳಾದ ಪ್ರೊ. ಎನ್.ಕೆ. ಲೋಕನಾಥ್ ಹಾಗೂ ಉಪಸ್ಥಿತರಿರುವ ಗೌರವಾನ್ವಿತ ಸದಸ್ಯರುಗಳನ್ನು ಸ್ವಾಗತಿಸಿದರು.

ನಂತರ, ನೂತನವಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಡಾ. ನಾಗರಾಜ ಎನ್, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

ಹಾಗೂ

ಇದುವರೆವಿಗೂ ಕುಲಸಚಿವ (ಪರೀಕ್ಷಾಂಗ) ಪದನಿಮಿತ್ತ ಸಿಂಡಿಕೇಟಿನ ಸದಸ್ಯರಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಡಾ. ಬಿ. ಬಸಪ್ಪ, ಸಹ ಪ್ರಾಧ್ಯಾಪಕರು, ಸಾವಯವ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ತದನಂತರ ಕಾರ್ಯಸೂಚಿಯನ್ನು ಈ ಕೆಳಕಂಡಂತೆ ಮಂಡಿಸಲಾಯಿತು.

<table>
<tr><th>ವಿಷಯ ಸಂಖ್ಯೆ</th><th>ವಿಷಯ ಸಂಕ್ಷಿಪ್ತವಾಗಿ</th></tr>
<tr><td colspan="2">ದಿನಾಂಕ: 12-06-2024ರಂದು ನಡೆದ "ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.<br>ಹಾಗೂ<br>ದಿನಾಂಕ: 20-06-2024ರಂದು ಜರುಗಿದ "ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.</td></tr>
<tr><td colspan="2">ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಸಿಂಡಿಕೇಟ್ ಸಭೆಯ ನಡಾವಳಿಯನ್ನು ಗಮನಿಸಿದಾಗ ಸಭೆಯಲ್ಲಿ ಮಾತನಾಡುವ ವಾಕ್ಯಗಳು ಯಥಾವತ್ತಾಗಿ ಬಂದಿರುವುದಿಲ್ಲ. ನಾವು ಪ್ರಸ್ತಾಪ ಮಾಡುವ ಮುಖ್ಯವಾದ ವಿಷಯಗಳು ನಡಾವಳಿಯಲ್ಲಿರುವುದಿಲ್ಲ. ಅಂದರೆ ಕೆಲವೇ ಕೆಲವು ವಿಷಯಗಳು ಮಾತ್ರ ಇರುತ್ತವೆ. ಕೆಲವು ವಿಭಾಗಗಳಲ್ಲಿ, ಕೋರ್ಟ್‌ನಲ್ಲಿ, ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಜರುಗುವ ಸಭೆಗಳ ನಡಾವಳಿಗಳನ್ನು ಸಭೆ ಜರುಗುವ ಸಂದರ್ಭದಲ್ಲಿಯೇ ಬೆರಳಚ್ಚು ಮಾಡುತ್ತಿರುತ್ತಾರೆ. ಆ ರೀತಿಯಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯವು ಅಳವಡಿಸಿಕೊಳ್ಳುವುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಿಪಡಿಸಿದರು. ಶ್ರೀ ಮಹದೇಶು, ಡಾ. ಸಿ ಬಸವರಾಜು ಇವರುಗಳು ಸಹ ಸದರಿ ವಿಷಯಕ್ಕೆ ದನಿಗೂಡಿಸಿದರು.</td></tr>
<tr><td>ತೀರ್ಮಾನ</td><td>ದಿನಾಂಕ : 12-06-2024ರಂದು ನಡೆದ "ಸಿಂಡಿಕೇಟಿನ ವಿಶೇಷ ಸಭೆ"ಯ ಹಾಗೂ ದಿನಾಂಕ : 20-06-2024ರಂದು ಜರುಗಿದ "ಸಿಂಡಿಕೇಟಿನ ಮೂರನೇ ಸಾಮಾನ್ಯ ಸಭೆ"ಯ ನಡವಳಿಗಳನ್ನು ಹಾಗೂ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.</td></tr>
<tr><td>ಸಾಮಾನ್ಯ ಸಭೆ 2024/4.1</td><td>ದಿನಾಂಕ: 06-09-2024ರ "ಸ್ವರ್ಣ ಗೌರಿ" ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯವು ಸ್ಥಳೀಯ ರಜೆ ಎಂದು ಘೋಷಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ಪ್ರತಿ ವರ್ಷದಂತೆ ಸ್ವರ್ಣಗೌರಿ ವ್ರತ ಹಬ್ಬದ ದಿನವನ್ನು ಮೈಸೂರು ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಸ್ಥಳೀಯ ಸಾರ್ವತ್ರಿಕ ರಜೆ ದಿನವೆಂದು ಹಿಂದಿನಿಂದಲೂ ಘೋಷಿಸಲಾಗುತ್ತಿರುವುದರಿಂದ ಈ ವರ್ಷದಲ್ಲೂ ಸಹ ದಿನಾಂಕ: 06-09-2024ರ ಶುಕ್ರವಾರದಂದು ಬರುವ "ಸ್ವರ್ಣಗೌರಿ ವ್ರತ" ದಿನವನ್ನು ವಿಶ್ವವಿದ್ಯಾನಿಲಯದ ಸ್ಥಳೀಯ ರಜಾದಿನವೆಂದು ಘೋಷಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ 2024/4.2</td><td>ರಸಾಯನಶಾಸ್ತ್ರ, ಜೈನಶಾಸ್ತ್ರ ಮತ್ತು ಪ್ರಾಕೃತ ಮತ್ತು ಸಂಸ್ಕೃತ, ಜೀವರಸಾಯನಶಾಸ್ತ್ರ ಮತ್ತು ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕ ಮಾಡಿರುವ ಬಗ್ಗೆ ಸಿಂಡಿಕೇಟಿನ ಸಭೆಯ ಅನುಸಮರ್ಥನೆಗಾಗಿ.</td></tr>
<tr><td></td><td>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಅಧ್ಯಕ್ಷರನ್ನು ಉದ್ದೇಶಿಸಿ ಮಾತನಾಡುತ್ತಾ, you have been rightly pointing out every time that we should use language carefully, in that context I want to invite your attention to that you have quoted Act 34(7) "The Chairman shall be appointed by the Syndicate for a term of two years, or for such other term as the Syndicate may determine from time to time" ಇದರ ಪ್ರಕಾರ ಸಿಂಡಿಕೇಟ್ ನೇಮಕ ಮಾಡುತ್ತದೆ ಎಂದು ತಿಳಿಸಲಾಗಿದೆ. ಆದರೆ ಮಾನ್ಯ ಕುಲಪತಿಗಳು ಹೊರಡಿಸಿರುವ ಆದೇಶಗಳಲ್ಲಿ "ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ" ಎಂಬ ವಾಕ್ಯವಿರುವುದಾಗಿ ತಿಳಿಸಿದರು.</td></tr>
</table>

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಆದೇಶವನ್ನು ನೀಡಲಾಗಿದೆ ಎಂದು ತಿಳಿಸಿದರು.<br><br>ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫಾರವರು ಮಾತನಾಡಿ, "ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ" ಎಂಬುದರ ಬದಲಾಗಿ "ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ" ಎಂದು ವಾಕ್ಯವನ್ನು ಬದಲಾವಣೆ ಮಾಡಬೇಕೆಂದು ಸಭೆಯ ಗಮನಕ್ಕೆ ತಿಳಿಸಿದರು. ಹಾಗೂ ಅಂತೆಯೇ ಕ್ರಮವಹಿಸಲಾಗುವುದೆಂದು ಕುಲಸಚಿವರು ಸಭೆಗೆ ತಿಳಿಸಿದರು.<br><br>ಶ್ರೀ ಮಹದೇಶುರವರು ಮಾತನಾಡಿ, ವಿಭಾಗದ ಅಧ್ಯಕ್ಷರನ್ನಾಗಿ ಎರಡು ವರ್ಷಗಳಿಗೊಮ್ಮೆ ನೇಮಕಾತಿ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಅಧ್ಯಕ್ಷರ ಅವಧಿ ಮುಕ್ತಾಯಗೊಳ್ಳುವ ದಿನಾಂಕ ಮಾನ್ಯ ಕುಲಪತಿಯವರಿಗೆ ಮೊದಲೇ ತಿಳಿದಿರುವುದರಿಂದ ಎಲ್ಲವನ್ನೂ ಸಿಂಡಿಕೇಟ್ ಸಭೆಗೆ ಅನುಸಮರ್ಥನೆಗೆ ತರುವ ಬದಲು ಮಾನ್ಯ ಕುಲಪತಿಯವರು ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಿರುವ ಕುರಿತು ನಮಗೆ ಯಾವುದೇ ಆಕ್ಷೇಪಣೆ ಇಲ್ಲದಿರುವುದರಿಂದ ಹಾಗೂ ಮಾನ್ಯ ಕುಲಪತಿಯವರು ನುರಿತ ಅಧ್ಯಾಪಕರನ್ನೇ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡುವುದರಿಂದ ಸಿಂಡಿಕೇಟ್ ಸಭೆಗೆ ಅನುಸಮರ್ಥನೆ ಪಡೆಯುವುದರ ಬದಲಾಗಿ ಅನುಮೋದನೆಗೆ ವಿಷಯವನ್ನು ಮಂಡಿಸುವಂತೆ ಕೋರಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ದಿನಾಂಕ: 13-03-2024ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ, ವಿವಿಧ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಲಾಗಿದೆ. ಸದರಿ ವಿಷಯಗಳ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿರುವುದಾಗಿ ತಿಳಿಸಿದರು.<br><br>ಡಾ. ಬಸವರಾಜು ಸಿ. ರವರು ಮಾತನಾಡಿ, ಅಧ್ಯಯನ ವಿಭಾಗಗಳ ಅಧ್ಯಕ್ಷರ ನೇಮಕಾತಿ ವಿಷಯವೊಂದೆ ಅಲ್ಲ ಟೆಂಡರ್ ಅಥವಾ ಯಾವುದೇ ವಿಷಯವಾಗಲೀ ಸಿಂಡಿಕೇಟ್ ಸಭೆಗೆ ವಿಷಯವನ್ನು ಅನುಸಮರ್ಥನೆ ಕೋರಿ ಮಂಡಿಸುವುದರ ಬದಲು ಆದ್ಯತೆಯ ವಿಷಯಗಳನ್ನು ಅನುಮೋದನೆಗಾಗಿ ಸಭೆಯ ಗಮನಕ್ಕೆ ತರಬೇಕೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕುಲಪತಿಯವರಿಗೆ ತಮ್ಮದೇ ಆದ ಆಡಳಿತಾತ್ಮಕ ಅಧಿಕಾರವಿರುತ್ತದೆ. ಪ್ರತಿಯೊಂದು ವಿಷಯಗಳನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ತರಲು ಸಾಧ್ಯವಿಲ್ಲ. ಯಾವ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೋ ಅಥವಾ ಬೇಡವೋ ಎಂಬುದರ ಬಗ್ಗೆ ನಿರ್ಧರಿಸಿ ಮಂಡಿಸಲು ಕ್ರಮಕೈಗೊಳ್ಳಲಾಗಿರುತ್ತದೆ ಎಂದು ತಿಳಿಸಿದರು.<br><br>ಮುಂದುವರಿದು, ಕುಲಪತಿಯವರು ಮಾತನಾಡಿ, ಕುಲಪತಿಯವರು, ಕುಲಸಚಿವ (ಆಡಳಿತ), ಕುಲಸಚಿವ (ಪರೀಕ್ಷಾಂಗ), ಹಣಕಾಸು ಅಧಿಕಾರಿ, ಕಾರ್ಯಪಾಲಕ ಅಭಿಯಂತರರು ಹಾಗೂ ವಿಶ್ವವಿದ್ಯಾನಿಲಯದ ಇತರೆ ಶಾಸನಬದ್ಧ ಅಧಿಕಾರಿಗಳಿಗೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸಲು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ರನ್ವಯ ಹಾಗೂ ಕೆ.ಸಿ.ಎಸ್.ಆರ್ ನಿಯಮಗಳನ್ವಯ ಕಾರ್ಯನಿರ್ವಹಿಸಲು ಅಧಿಕಾರವುಳ್ಳವರಾಗಿರುತ್ತಾರೆ. ಸದರಿ ಅಧಿಕಾರಿಗಳು ಅವರುಗಳ ವಿಭಾಗ/ಕಛೇರಿಗಳ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ವಯ ಅವಕಾಶಗಳಿರುವಂತೆ ಕರ್ತವ್ಯವನ್ನು ನಿರ್ವಹಿಸಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಅಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ** |

ಎರಡು ವರ್ಷಗಳವರೆಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ ಈ ಕೆಳಕಂಡ ಅಧ್ಯಯನ ವಿಭಾಗಗಳಿಗೆ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ, ಅಧ್ಯಕ್ಷರುಗಳನ್ನಾಗಿ ನೇಮಕ ಮಾಡಿ ಹೊರಡಿಸಿರುವ ಆದೇಶಗಳನ್ನು ಸಭೆಯು ಅನುಸಮರ್ಥಿಸಿತು.

| ಕ್ರ. ಸಂ. | ಅಧ್ಯಯನ ವಿಭಾಗ | ನೂತನವಾಗಿ ನೇಮಕಗೊಂಡ ಅಧ್ಯಕ್ಷರ ಹೆಸರು | ನೇಮಕಾತಿಯನ್ನು ಜಾರಿಗೊಳಿಸಿರುವ ದಿನಾಂಕ |
|---|---|---|---|
| 1 | ರಸಾಯನಶಾಸ್ತ್ರ | ಪ್ರೊ. ಕೆ.ಎನ್.ಮೋಹನ್ | 29-06-2024 |
| 2 | ಜೈನಶಾಸ್ತ್ರ ಮತ್ತು ಪ್ರಾಕೃತ | ಪ್ರೊ. ಎಸ್.ಡಿ.ಶಶಿಕಲಾ | 26-06-2024 |
| 3 | ಸಂಸ್ಕೃತ | ಡಾ. ಎಂ.ವಾಸಂತಿ | 26-06-2024 |
| 4 | ಜೀವರಸಾಯನಶಾಸ್ತ್ರ | ಪ್ರೊ. ಕೆ.ಕೆಂಪರಾಜು | 22-07-2024 |
| 5 | ಆಹಾರ ವಿಜ್ಞಾನ ಮತ್ತು ಪೋಷಣೆ | ಡಾ. ಎಂ.ಕೋಮಲ | 31-07-2024 |

**ಸಾಮಾನ್ಯ ಸಭೆ 2024/4.3**

ಡಾ. ಎನ್. ನಾಗರಾಜ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಯುನೈಟೆಡ್ ಅರಬ್ ಎಮಿರೇಟ್ಸ್ (UAE) ರಾಷ್ಟ್ರಕ್ಕೆ ಭೇಟಿ ನೀಡಲು ಅನುಮತಿ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ದಿನಾಂಕ 17-01-2024 ರಂದೇ ಅಧ್ಯಕ್ಷರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗದವರ ಮೂಲಕ ಪತ್ರ ರವಾನಿಸಿದ್ದರೂ ಸಹ ಏಳು ತಿಂಗಳು ಕಳೆದ ನಂತರ ವಿಷಯವನ್ನು ಅನುಸಮರ್ಥನೆಗಾಗಿ ಮಂಡಿಸಿರುವಿರಿ ಎಂದು ಸಭೆಯ ಗಮನಕ್ಕೆ ತಂದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ದಿನಾಂಕ 19-01-2024ರಂದು ಹೊರಡಿಸಿರುವ ಆದೇಶದ ಕ್ರಮಸಂಖ್ಯೆ 3ರ ಷರತ್ತಿನಲ್ಲಿ ಸೂಚಿಸಿರುವಂತೆ "Immediately after returning from a foreign visit, the full details of the expenses related to the visit should be submitted to the University" ಎಂದು ತಿಳಿಸುತ್ತಾ, ಸದರಿ ವೆಚ್ಚದ ಮಾಹಿತಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದಾರೆಯೇ ಹಾಗೂ ಜನವರಿಯಲ್ಲಿ ಹೊರಡಿಸಿರುವ ಆದೇಶದ ಅನುಸಮರ್ಥನೆಗಾಗಿ ಏಳು ತಿಂಗಳ ನಂತರ ಮಂಡಿಸಿದ್ದು, ಇನ್ನು ಮುಂದೆ ಈ ರೀತಿ ಪುನರಾವರ್ತನೆಯಾಗುವುದು ಬೇಡ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯವು ಆರ್ಥಿಕ ಸೌಲಭ್ಯವನ್ನು ಒದಗಿಸಿದ್ದಲ್ಲಿ ಮಾತ್ರ ಮೇಲಿನ ಷರತ್ತು ಅನ್ವಯವಾಗುವುದು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಅಧಿಕೃತ ಭೇಟಿ (official visit) ಎಂಬ ಪದವನ್ನು ಷರತ್ತಿನಲ್ಲಿ ಸೇರ್ಪಡೆಗೊಳಿಸಿ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಕ್ರಮಸಂಖ್ಯೆ 3ರ ಷರತ್ತನ್ನು ತಾವೇ ಸೇರ್ಪಡೆಗೊಳಿಸಿರುವುದಾಗಿ ತಿಳಿಸುತ್ತಾ, ಸದರಿ ಷರತ್ತಿನಲ್ಲಿ ವೈಯಕ್ತಿಕವಾಗಿ ಭೇಟಿ ನೀಡಿದ್ದಲ್ಲಿ ಅಥವಾ ವಿಶ್ವವಿದ್ಯಾನಿಲಯದ ಕಾರ್ಯನಿಮಿತ್ತ ಭೇಟಿ ನೀಡಿದ್ದಲ್ಲಿ, ಆದೇಶ ಹೊರಡಿಸುವಾಗ ವಿದೇಶದ ಭೇಟಿಗನುಗುಣವಾಗಿ ಸದರಿ ಷರತ್ತನ್ನು ಮಾರ್ಪಾಡುಗೊಳಿಸುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದುದರಿಂದ ಸದರಿ ಅವಧಿಯಲ್ಲಿ ಸಿಂಡಿಕೇಟ್ ಸಭೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲ, ವಿಶೇಷ ಸಿಂಡಿಕೇಟ್ ಸಭೆ ನಡೆದ ನಂತರದ ಸಿಂಡಿಕೇಟ್ ಸಭೆಯಲ್ಲಿ ವಿಷಯ ಬಂದಿದ್ದರೂ ವಿಷಯಗಳು ಹೆಚ್ಚಾದ ಕಾರಣ ಸದರಿ ವಿಷಯವನ್ನು

| | |
|---|---|
| | ಮುಂದೂಡಲಾಗಿದ್ದರಿಂದ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಹೋಗಿ ಬರಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮತಿ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಡಾ. ಎನ್.ನಾಗರಾಜ, ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ 23-01-2024 ರಿಂದ 28-01-2024 ರವರೆಗೆ ವೈಯಕ್ತಿಕ ಕಾರಣಕ್ಕೆ ಯುನೈಟೆಡ್ ಅರಬ್ ಎಮಿರೇಟ್ಸ್ (UAE) ರಾಷ್ಟ್ರದ ಪ್ರವಾಸಕ್ಕಾಗಿ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಹೋಗಿ ಬರಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/4.4 | ಶಿಕ್ಷಕ ಸಲಹೆಗಾರರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಮಹಿಳಾ ವಿದ್ಯಾರ್ಥಿನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪದನಾಮದಲ್ಲಿ ಬ್ಯಾಂಕ್‌ನಲ್ಲಿ ಚಾಲ್ತಿ ಖಾತೆಯನ್ನು ತೆರೆಯಲು ಅನುಮತಿ ನೀಡಿರುವ ವಿಷಯವನ್ನು ಅನುಸಮರ್ಥಿಸುವ ಬಗ್ಗೆ. |
| | ಶಿಕ್ಷಕ ಸಲಹೆಗಾರರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ ಮಹಿಳಾ ವಿದ್ಯಾರ್ಥಿನಿಲಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪದನಾಮದಲ್ಲಿ ವಿಶ್ವವಿದ್ಯಾನಿಲಯ ಆವರಣ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಲ್ಲಿ ಚಾಲ್ತಿ ಖಾತೆಯನ್ನು ತೆರೆಯಲು ಅನುಮತಿ ನೀಡಿರುವುದಾಗಿ ಕುಲಸಚಿವರು ಸಭೆಯಲ್ಲಿ ವಿವರಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಉಳಿತಾಯ ಖಾತೆಯಲ್ಲಿ ಹಣ ಹೂಡಿಕೆ ಮಾಡಿದ್ದಲ್ಲಿ ಬಡ್ಡಿ ಬರುತ್ತದೆ. ಆದರೆ, ಚಾಲ್ತಿ ಖಾತೆಯಲ್ಲಿ ವ್ಯವಹರಿಸಿದಲ್ಲಿ ಬ್ಯಾಂಕ್‌ನವರು ಬಡ್ಡಿ ನೀಡುವುದಿಲ್ಲವೆಂದು ತಿಳಿಸಿದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಬದಲು ಬೇರೆ ಬ್ಯಾಂಕ್‌ಗಳಲ್ಲಿ ಉದಾಹರಣೆಗೆ ಹೆಚ್‌ಡಿಎಫ್‌ಸಿ ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್‌ಗಳಲ್ಲಿ ವ್ಯವಹರಿಸಿದಲ್ಲಿ, 7.5% ಬಡ್ಡಿ ಬರುತ್ತದೆ ಹಾಗೂ ಉಳಿತಾಯ ಖಾತೆಯಲ್ಲಿ ಬಡ್ಡಿ ಬರುವುದರಿಂದ ಚಾಲ್ತಿ ಖಾತೆಯನ್ನು ತೆರೆಯುವ ಬದಲು ಉಳಿತಾಯ ಖಾತೆಯಲ್ಲಿ ವ್ಯವಹರಿಸುವುದು ಉತ್ತಮವೆಂದು ಸಲಹೆ ನೀಡಿದರು. ಮುಂದುವರೆದು, ಇದರ ಕುರಿತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರಿಗೆ ಇದರ ಕುರಿತು ಮತ್ತೊಮ್ಮೆ ಮನವರಿಕೆ ಮಾಡಿಕೊಡುವಂತೆ ಹಣಕಾಸು ಅಧಿಕಾರಿಯವರನ್ನು ಕೋರಿದರು.<br><br>ಹಣಕಾಸು ಅಧಿಕಾರಿಯವರು ಮಾತನಾಡಿ, ಶಿಕ್ಷಕ ಸಲಹೆಗಾರರಿಗೆ ಬ್ಯಾಂಕ್ ವತಿಯಿಂದ ಮೌಖಿಕವಾಗಿ ಸೂಚನೆ ನೀಡಿದರ ಹಿನ್ನೆಲೆಯಲ್ಲಿ, ಮಹಿಳಾ ವಿದ್ಯಾರ್ಥಿನಿಲಯಕ್ಕೆ ಅವಶ್ಯವಿರುವುದರಿಂದ ಉಳಿತಾಯ ಖಾತೆಯ ಬದಲು ಚಾಲ್ತಿ ಖಾತೆಯನ್ನು ತೆರೆಯಲಾಗಿದೆ. ಈ ಸಂಬಂಧ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳೊಂದಿಗೆ ಮತ್ತೊಮ್ಮೆ ಚರ್ಚಿಸಿ ಚಾಲ್ತಿ ಖಾತೆಯನ್ನು ಉಳಿತಾಯ ಖಾತೆಗೆ ಬದಲಾಯಿಸಿಕೊಡುವಂತೆ ಕೋರಲಾಗುವುದೆಂದು ಸಭೆಯ ಗಮನಕ್ಕೆ ತಂದರು. |
| ತೀರ್ಮಾನ | **ಮಹಿಳಾ ವಿದ್ಯಾರ್ಥಿನಿಲಯಕ್ಕೆ ಅವಶ್ಯವಿರುವ ಉಳಿತಾಯ ಖಾತೆಯ ಬದಲು ಚಾಲ್ತಿ ಖಾತೆಯನ್ನು ತೆರೆದಿರುವ ಕ್ರಮದ ಕುರಿತು ಸಿಂಡಿಕೇಟ್ ಸಭೆಯು ಸುದೀರ್ಘವಾಗಿ ಚರ್ಚಿಸಿ ಮತ್ತೊಮ್ಮೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕಾರಿಗಳೊಂದಿಗೆ ಚರ್ಚಿಸಿ ಚಾಲ್ತಿ ಖಾತೆಯ ಬದಲಿಗೆ ಉಳಿತಾಯ ಖಾತೆಗೆ ಮಾರ್ಪಾಡು ಮಾಡಿಕೊಡುವಂತೆ ಕೋರಲು ಹಣಕಾಸು ಅಧಿಕಾರಿಗಳು ಕ್ರಮವಹಿಸುವಂತೆ ಸಭೆಯು ತೀರ್ಮಾನಿಸಿತು.** |

<table>
<tr><td>ಸಾಮಾನ್ಯ ಸಭೆ<br>2024/4.5</td><td>ವಿಶ್ವವಿದ್ಯಾನಿಲಯದಲ್ಲಿ 1) Prof. S. Sathyanarayan and Prof. P.N. Satish Gold Medal 2) Prof. C. Srikantappa and Late Prof. A.S. Janardhan Gold Medal ಮತ್ತು 3) Smt. Sharadamma and Sri K.G. Narasimha Shastry Gold Medal ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದತ್ತಿಯ ದಾನಿಗಳು ಉಲ್ಲೇಖಿಸಿರುವ ಷರತ್ತಿನಂತೆ ಸಂಬಂಧಿತ ವಿಷಯ/ ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಈ ಕೆಳಗೆ ನಮೂದಿಸಿರುವ ಮೂರು ಚಿನ್ನದ ಪದಕಗಳನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.
<table>
<tr><td>ದತ್ತಿಯ ಹೆಸರು</td><td>“Prof. S. Sathyanarayan and Prof. P.N. Satish Gold Medal”</td></tr>
<tr><td>ಷರತ್ತುಗಳು</td><td>This Gold Medal should be awarded to the Candidate who has passed M.Sc. Geology or M.Sc. Applied Geology Examination the Highest Scorer in Sedimentary Petrology & Geotectonics Paper of 3rd Sem. M.Sc. Applied Geology OR the Highest Scorer in Sedimentary Petrology and Structural Geology Paper of 1st Sem. M.Sc. Geology in First Attempt and Securing Highest Marks.</td></tr>
<tr><td>ದತ್ತಿಯ ಹೆಸರು</td><td>“Prof. C. Srikantappa and Late Prof. A.S. Janardhan Gold Medal”</td></tr>
<tr><td>ಷರತ್ತುಗಳು</td><td>This Gold Medal should be awarded to the Candidate who has passed M.Sc. Geology or M.Sc. Applied Geology Examination the Highest Scorer in Advanced Igneous Petrology Paper of 3rd Sem. of M.Sc. Applied Geology OR the Highest Scorer in Igneous & Metamorphic Petrology Paper of 2nd Sem. of M.Sc. Geology in First Attempt and Securing Highest Marks</td></tr>
<tr><td>ದತ್ತಿಯ ಹೆಸರು</td><td>“Smt. Sharadamma and Sri. K.G.Narasimha Shastry Gold Medal”</td></tr>
<tr><td>ಷರತ್ತುಗಳು</td><td>This Gold Medal should be awarded to the Candidate who has passed M.Sc. in Geology in First Attempt and Securing Highest Marks in All Sem.</td></tr>
</table></td></tr>
<tr><td>ಸಾಮಾನ್ಯ ಸಭೆ<br>2024/4.6</td><td>ವಿಶ್ವವಿದ್ಯಾನಿಲಯದಲ್ಲಿ 1) “ಪ್ರೊ. ಗೋಪಾಲ ಮರಾಠೆ ಕೆ. ಚಿನ್ನದ ಪದಕ”, 2) “ಪ್ರೊಫೆಸರ್ ದೊಡ್ಡೇರಿ ಅಶ್ವತ್ಥನಾರಾಯಣರಾವ್ ಶಂಕರ್ ಚಿನ್ನದ ಪದಕ” ಮತ್ತು 3) “Prof. C. Basavaraju’s Gold Medal” ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ</td></tr>
</table>

| | |
|---|---|
| | ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದತ್ತಿಗಳಲ್ಲಿ ದಾನಿಗಳು ಉಲ್ಲೇಖಿಸಿರುವ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಈ ಕೆಳಗೆ ನಮೂದಿಸಿರುವ ಮೂರು ಚಿನ್ನದ ಪದಕಗಳನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ದತ್ತಿಯ ಹೆಸರು | "ಪ್ರೊ. ಗೋಪಾಲ ಮರಾಠೆ ಕೆ. ಚಿನ್ನದ ಪದಕ" |
| ಷರತ್ತುಗಳು | The Gold Medal should be awarded to the candidate who has secured highest marks in M.Sc. in Molecular Biology Examination at DoS in Molecular Biology, Manasagangotri, University of Mysore in first attempt. |
| ದತ್ತಿಯ ಹೆಸರು | "ಪ್ರೊಫೆಸರ್ ದೊಡ್ಡೇರಿ ಅಶ್ವತ್ಥನಾರಾಯಣರಾವ್ ಶಂಕರ್ ಚಿನ್ನದ ಪದಕ" |
| ಷರತ್ತುಗಳು | The Gold Medal should be awarded to the candidate who has passed in First Attempt- M.A. in English Examination and securing highest marks. |
| ದತ್ತಿಯ ಹೆಸರು | **"Prof. C. Basavaraju's Gold Medal"** |
| ಷರತ್ತುಗಳು | The Gold Medal should be awarded to the candidate who has passed as the topper in L.L.M. Examination in Constitution Law & Business Law in first attempt and securing highest marks at DoS in Law. |

| | |
|---|---|
| ಸಾಮಾನ್ಯ ಸಭೆ 2024/4.7 | ವಿಶ್ವವಿದ್ಯಾನಿಲಯದಲ್ಲಿ "ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಮತ್ತು ಡಾ. ವಿ.ಟಿ. ಸುಶೀಲ ಜಯರಾಮ್ ದತ್ತಿ, ಮಂಡ್ಯ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 29(2) (r) ರ ಪ್ರಕಾರ ದಾನಿಗಳು ದತ್ತಿಯ ನಿಬಂಧನೆಯಲ್ಲಿ ಸೂಚಿಸಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ಎಂ.ಎ ಕನ್ನಡ ಪರೀಕ್ಷೆಯಲ್ಲಿ ಮೊದಲ ಬಾರಿಗೆ ತೇರ್ಗಡೆಯಾಗಿ ಅತಿ ಹೆಚ್ಚು ಅಂಕ ಗಳಿಸುವ ಅಭ್ಯರ್ಥಿಗೆ "ದೇವಮ್ಮ ಪುಟ್ಟಚ್ಚಿ ಸಿದ್ದೇಗೌಡ ಮತ್ತು ಡಾ. ವಿ.ಟಿ. ಸುಶೀಲ ಜಯರಾಮ್ ದತ್ತಿ, ಮಂಡ್ಯ ನಗದು ಬಹುಮಾನ" ದತ್ತಿಯನ್ನು ಸ್ಥಾಪನೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2024/4.8 | ಏಳು (07) ವರ್ಷಗಳ ನಂತರ ಮಹಾಪ್ರಬಂಧವನ್ನು ಸಲ್ಲಿಸಲು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ವಿವಿಧ ವಿಷಯಗಳಲ್ಲಿ ಸಂಶೋಧನಾ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಸಂಶೋಧಕರುಗಳಿಗೆ ಏಳು (07) ವರ್ಷಗಳ ಸಂಶೋಧನಾ ಅವಧಿಯು ಪೂರ್ಣಗೊಂಡಿದ್ದು, ನಿಗದಿತ ಅವಧಿಯೊಳಗೆ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ವಿಫಲವಾಗಿರುವುದರಿಂದ ರೂ.1,00,000/- ದಂಡ ಶುಲ್ಕದೊಂದಿಗೆ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬಂದಂತೆ ಮಹಾಪ್ರಬಂಧವನ್ನು ಸಲ್ಲಿಸಲು ಹೆಚ್ಚುವರಿಯಾಗಿ ಮೂರು ತಿಂಗಳುಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ಸಭೆಯು ಅನುಮತಿಸಿತು. |

| ಕ್ರ.ಸಂ. | ಸಂಶೋಧನಾ ಅಭ್ಯರ್ಥಿಯ ಹೆಸರು ಹಾಗೂ ವಿಭಾಗ |
|---|---|
| 1 | ಶ್ರೀ ಲಕ್ಷ್ಮಿಕಾಂತ್.ಎಂ.ಎನ್, ಮಹಿಳಾ ಅಧ್ಯಯನ ಕೇಂದ್ರ |

| | |
|---|---|
| | 2 ಶ್ರೀ ವಿದ್ಯಾಶಂಕರ, ಗಣಕ ವಿಜ್ಞಾನ ಅಧ್ಯಯನ ವಿಭಾಗ<br>3 ಶ್ರೀ ಬಿ.ಬಿ.ಪಾಲ್ ರಾಜ್, ಮನೋವಿಜ್ಞಾನ ವಿಭಾಗ<br>4 ಶ್ರೀ ಪವನ್ ಮಹಿಕರ್ ಹೆಚ್.ಎಂ., ಅಪರಾಧಶಾಸ್ತ್ರ ಮತ್ತು ನ್ಯಾಯವಿಜ್ಞಾನ ವಿಭಾಗ |
| ಸಾಮಾನ್ಯ ಸಭೆ 2024/4.9 | ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| ತೀರ್ಮಾನ | **ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠಕ್ಕೆ ಮಾಹೆಯಾನ ರೂ. 8,000/-ಗಳ ಗೌರವ ಸಂಭಾವನೆಯೊಂದಿಗೆ ಒಂದು ವರ್ಷದ ಅವಧಿಗೆ ಪ್ರೊ. ರಹಮತ್ ತರೀಕೆರೆ, ವಿಶ್ರಾಂತ ಪ್ರಾಧ್ಯಾಪಕರು ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**<br><br>**ಒಂದು ವೇಳೆ ಪ್ರೊ. ರಹಮತ್ ತರೀಕೆರೆ, ವಿಶ್ರಾಂತ ಪ್ರಾಧ್ಯಾಪಕರು ಇವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅಸಮ್ಮತಿ ಸೂಚಿಸಿದಲ್ಲಿ, ಶ್ರೀ ಸಿ. ಬಸವಲಿಂಗಯ್ಯ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| ಸಾಮಾನ್ಯ ಸಭೆ 2024/4.10 | 2022-23ನೇ ಸಾಲಿನ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಶನ್ ಲಿಮಿಟೆಡ್, ಮಂಡ್ಯರವರಿಗೆ 16 ದಿನಸಿ ಪದಾರ್ಥಗಳ ದರಗಳನ್ನು ಪರಿಷ್ಕರಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| ತೀರ್ಮಾನ | **2022-23ನೇ ಸಾಲಿನ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಶನ್ ಲಿಮಿಟೆಡ್, ಮಂಡ್ಯರವರು ಸರಬರಾಜು ಮಾಡಿದ್ದ 16 ದಿನಸಿ ಪದಾರ್ಥಗಳ ದರಗಳನ್ನು ದಿನಾಂಕ: 01-02-2024 ರಿಂದ ಜಾರಿಗೆ ಬಂದಂತೆ ಹೊಸ ಟೆಂಡರ್‌ದಾರರು ಆಯ್ಕೆಗೊಳ್ಳುವವರೆಗೆ ಪರಿಷ್ಕರಿಸಿರುವ ದರದಂತೆ ಸರಬರಾಜು ಮಾಡಲು ಹೊರಡಿಸಿರುವ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| ಸಾಮಾನ್ಯ ಸಭೆ 2024/4.11 | ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ ಫೆಡರೇಶನ್ ಲಿ., ರವರಿಗೆ ಪರಿಷ್ಕರಿಸಿರುವ ದರಗಳನ್ನು 2023ರ ಆಗಸ್ಟ್ ಮಾಹೆಯ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಮೆ.: ವಿನಾಯಕ ಎಂಟರ್ ಪ್ರೈಸಸ್‌ರವರಿಗೂ ಅನ್ವಯವಾಗುವಂತೆ ಮಾಡಿ 06 ದಿನಸಿ ಪದಾರ್ಥಗಳ ಪರಿಷ್ಕೃತ ದರಗಳ ವ್ಯತ್ಯಾಸದ ಮೊತ್ತಗಳನ್ನು ಪಾವತಿಸಲು ಘಟನೋತ್ತರ ಮಂಜೂರಾತಿ ನೀಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| ತೀರ್ಮಾನ | **ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುವ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ ಫೆಡರೇಶನ್ ಲಿ., ರವರಿಗೆ ಪರಿಷ್ಕರಿಸಿರುವ ದರಗಳನ್ನು 2023ರ ಆಗಸ್ಟ್ ಮಾಹೆಯ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರುವ ಮೆ.: ವಿನಾಯಕ ಎಂಟರ್ ಪ್ರೈಸಸ್‌ರವರಿಗೂ ಅನ್ವಯವಾಗುವಂತೆ ಮಾಡಿ 06 ದಿನಸಿ ಪದಾರ್ಥಗಳ ಪರಿಷ್ಕೃತ ದರಗಳ ವ್ಯತ್ಯಾಸದ ಮೊತ್ತಗಳನ್ನು ಪಾವತಿಸಲು ಘಟನೋತ್ತರ ಮಂಜೂರಾತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

<table>
<tr><td>ಸಾಮಾನ್ಯ ಸಭೆ<br>2024/4.12</td><td>ಮೆ.: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಇವರು 2022-23ನೇ ಸಾಲಿನಲ್ಲಿ ವಿ.ವಿ. ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿರುವ ನಂದಿನಿ ಹಾಲು ಹಾಗೂ ಮೊಸರುಗಳ ದರದ ಪರಿಷ್ಕೃತ ವ್ಯತ್ಯಾಸದ ಮೊತ್ತಗಳನ್ನು ಪಾವತಿಸಲು ಮಂಜೂರಾತಿ ನೀಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ.</td></tr>
<tr><td>ತೀರ್ಮಾನ</td><td>ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಹಕಾರ ಸಂಘದಿಂದ ಹಾಲು ಮತ್ತು ಮೊಸರಿನ ಪ್ರತಿ ಲೀಟರ್‌ಗೆ ದರವನ್ನು ತಲಾ ರೂ.3/-ರಂತೆ ಪರಿಷ್ಕರಿಸಿ ಆದೇಶ ಹೊರಡಿಸಿರುವ ಹಿನ್ನೆಲೆಯಲ್ಲಿ, ಮೈಸೂರು ನಗರ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ 2022-23ನೇ ಸಾಲಿನಲ್ಲಿ ನಂದಿನಿ ಹಾಲು ಹಾಗೂ ಮೊಸರುಗಳನ್ನು ಸರಬರಾಜು ಮಾಡಿರುವ ಮೆ.: ವಿನಾಯಕ ಎಂಟರ್‌ಪ್ರೈಸಸ್ ಚಾಮರಾಜನಗರ ಇವರಿಗೆ ದಿನಾಂಕ: 01-08-2023ರಿಂದ ಅನ್ವಯವಾಗುವಂತೆ ನಂದಿನಿ ಹಾಲು ಹಾಗೂ ಮೊಸರಿನ ದರಗಳನ್ನು ತಲಾ ರೂ.3/-ರಂತೆ ಪರಿಷ್ಕರಿಸಿ ಪಾವತಿಸಲು ಮಂಜೂರಾತಿ ನೀಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.</td></tr>
<tr><td>ಸಾಮಾನ್ಯ ಸಭೆ<br>2024/4.31</td><td>PROMOTIONS TO UNIVERSITY TEACHERS UNDER UGC-CAS</td></tr>
<tr><td>Decision</td><td>"The recommendations of the Selection committee dated 26-07-2024 in various subjects from the post of Professor to Senior Professor in various disciplines (from Academic level 14 to academic level 15) furnished below is approved. Further, the Syndicate has also decided to extend the monetary benefits to the teachers from the date of the University order and subsequent reporting to the post to which they are promoted.
<table>
<tr><th>Sl. No.</th><th>Name of the Professor</th><th>Subject</th></tr>
<tr><td>1</td><td>Dr. D Soner Nandappa</td><td>DoS in Mathematics</td></tr>
<tr><td>2</td><td>Dr. Rangarajan</td><td>DoS in Mathematics</td></tr>
<tr><td>3</td><td>Dr. K R Vasuki</td><td>DoS in Mathematics</td></tr>
<tr><td>4</td><td>Dr. Asna Urooj</td><td>DoS in Food Science and Nutrition</td></tr>
<tr><td>5</td><td>Dr. K Kemparaju</td><td>DoS in Bio Chemistry</td></tr>
<tr><td>6</td><td>Dr. Nagaraja Naik</td><td>DoS in Chemistry</td></tr>
<tr><td>7</td><td>Dr. H D Revannasiddappa</td><td>DoS in Chemistry</td></tr>
<tr><td></td><td></td><td></td></tr>
</table></td></tr>
<tr><td colspan="2">ಸಾಮಾನ್ಯ ಸಭೆ 2024/4.13 ರಿಂದ 4.30 ರವರೆಗಿನ ವಿಷಯಗಳನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸುವುದಾಗಿ ತಿಳಿಸಿ ಎಲ್ಲಾ ವಿಷಯಗಳನ್ನು ಮುಂದೂಡಲಾಯಿತು.</td></tr>
</table>

**ಇತರೆ ವಿಷಯಗಳು:**

1. ಡಾ. ಶಿಲ್ಪ ಜೆ, ಇವರು ಮಾತನಾಡಿ, ಸಿಂಡಿಕೇಟ್ ಸಭೆಯ ಕಾರ್ಯಕಲಾಪಗಳನ್ನು ನೇರ ಪ್ರಸಾರ ಮಾಡಿ ಎಂದು ತಿಳಿಸಿದರು.

   ಈ ಕುರಿತು ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸುವ ಕೆಲವೊಂದು ಸೂಕ್ಷ್ಮ ವಿಷಯಗಳನ್ನು ಪಾರದರ್ಶಕವಾಗಿ ಚರ್ಚಿಸಲು ಸಾಧ್ಯವಾಗುವುದಿಲ್ಲ, ಅಂತಹ ವಿಷಯಗಳಿಗೆ ಮುಕ್ತವಾಗಿ ಚರ್ಚಿಸಿ ಸಿಂಡಿಕೇಟ್‌ನಲ್ಲಿ ನಿರ್ಣಯವನ್ನು ಕೈಗೊಳ್ಳಬೇಕಾಗುತ್ತದೆ. ಹಾಗೆಯೇ ನಿರ್ಣಯಗಳನ್ನು ಕೈಗೊಳ್ಳುವಾಗ ನೇರ ಪ್ರಸಾರವಾದಲ್ಲಿ ಸಂಬಂಧಪಟ್ಟವರು ತರುವ ಒತ್ತಡಗಳನ್ನು ನಿಭಾಯಿಸಿಕೊಂಡು ನ್ಯಾಯಯುತವಾದ

ತೀರ್ಮಾನವನ್ನು ತೆಗೆದುಕೊಳ್ಳಲು ಸಾಧ್ಯವಾಗದಿರಬಹುದು. ಆದ್ದರಿಂದ ನೇರ ಪ್ರಸಾರ ಮಾಡಲು ಕಷ್ಟಸಾಧ್ಯ ಎಂದು ಸಭೆಯ ಗಮನಕ್ಕೆ ತಂದರು.

2. **ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳ ಬಗ್ಗೆ.**

ಶ್ರೀ ನಟರಾಜು ಹೆಚ್.ಎಸ್.ರವರು ಮಾತನಾಡಿ, ವಿದ್ಯಾರ್ಥಿನಿಲಯದಲ್ಲಿರುವ ಕೆಲವು ವಿದ್ಯಾರ್ಥಿಗಳು ಅವರ ಸಮಸ್ಯೆಗಳನ್ನು ಹೇಳಿಕೊಂಡಿರುತ್ತಾರೆ. ಅದರಲ್ಲಿ ಕೆಲವು ಸರಿಯೆನಿಸಿದರೆ, ಕೆಲವು ತಪ್ಪು ಎನಿಸಿವೆ. ವಿದ್ಯಾರ್ಥಿನಿಲಯದ ಪರಿಸ್ಥಿತಿ ನೋಡಿ ಇತರೆ ಸಿಂಡಿಕೇಟ್ ಸದಸ್ಯರುಗಳ ಗಮನಕ್ಕೆ ತಂದು, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳಿಗೆ ತಿಳಿಸಿ, ತದನಂತರದಲ್ಲಿ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಲಾಗಿತ್ತು. ಪುರುಷರ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿದ್ದಾಗ ಅಲ್ಲಿದ್ದ ಶೌಚಾಲಯಗಳು ಶುಚಿತ್ವವಿಲ್ಲದಿರುವುದು ಕಂಡುಬಂದಿದೆಯೆಂದು ಶೌಚಾಲಯಗಳ ಛಾಯಾಚಿತ್ರಗಳನ್ನು ಸಭೆಯಲ್ಲಿ ಪ್ರದರ್ಶಿಸಿದರು.

ಡಾ. ಬಸವರಾಜು.ಸಿ ಅವರು ಮಾತನಾಡಿ, ವಿದ್ಯಾರ್ಥಿನಿಲಯಗಳು ಶುಚಿತ್ವವಿಲ್ಲದ ಸಂಬಂಧ ವಿದ್ಯಾರ್ಥಿಗಳನ್ನು ಕೇಳಿದಾಗ, ಕುಲಪತಿಗಳು ಹಾಗೂ ಕುಲಸಚಿವರು ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿ ಒಂದರಿಂದ ಒಂದೂವರೆ ವರ್ಷಗಳಾಗಿದೆಯೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ರವರು ಮಾತನಾಡಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ 29 ರನ್ವಯ Powers of the Syndicateನಲ್ಲಿ (2) (l) To regulate, supervise and control the residence and discipline of the students of the University within the campus and its annexes and to promote their health and wellbeing." ಎಂದು ಉಲ್ಲೇಖಿಸಿರುತ್ತದೆ. ಕಾಯ್ದೆಯಲ್ಲಿ ಸಿಂಡಿಕೇಟ್‌ಗೆ ಅಧಿಕಾರ ಕೊಟ್ಟಿರುವುದರಿಂದ, ಮಾನ್ಯ ಕುಲಪತಿಯವರು ದಿನಾಂಕವನ್ನು ನಿಗದಿಪಡಿಸಿದರೆ ಒಂದು ವಾರ ಪೂರ್ತಿ ಅಧ್ಯಯನ ವಿಭಾಗಗಳಿಗೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಬಹುದೆಂದು ತಿಳಿಸಿದರು.

ಶ್ರೀ ನಾಗರಾಜು .ಸಿ ಅವರು ಮಾತನಾಡಿ, ಮಹಿಳೆಯರ ವಿದ್ಯಾರ್ಥಿನಿಲಯ ಬ್ಲಾಕ್-1 ಮತ್ತು ಬ್ಲಾಕ್-3ಕ್ಕೆ ಭೇಟಿ ನೀಡಿದ್ದಾಗ, ಅಲ್ಲಿರುವ ಶೌಚಾಲಯ ಹಾಗೂ ಸ್ನಾನಗೃಹಗಳು ಶುಚಿತ್ವವಿಲ್ಲದೆ ಕುಸಿಯುವ ಹಂತದಲ್ಲಿದೆ. ಯಾವ ಸಂದರ್ಭದಲ್ಲಿ ಬೀಳುತ್ತದೆಯೆಂದು ತಿಳಿದಿಲ್ಲ. ಮುಂದಿನ ದಿನಗಳಲ್ಲಿ ಇಂತಹ ಪರಿಸ್ಥಿತಿಯುಂಟಾದರೆ ವಿಶ್ವವಿದ್ಯಾನಿಲಯವನ್ನು ಹೊಣೆ ಮಾಡುತ್ತಾರೆ. ಅಷ್ಟೇ ಅಲ್ಲದೇ ಕೆಲವೊಂದು ಕಟ್ಟಡಗಳಲ್ಲಿ ವಿದ್ಯುತ್ ಸ್ಪರ್ಶ ಮತ್ತು ಗ್ರೌಂಡಿಂಗ್ ಆಗುತ್ತಿದೆ. ಈ ಸಮಸ್ಯೆಗಳನ್ನು ಪರಿಶೀಲಿಸಲು ಖುದ್ದು ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಲಾಗಿದೆ. ಇದಕ್ಕೆ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆಯಬೇಕೆಂದರೆ, ಅನುಮತಿ ನೀಡುವುದರೊಂದಿಗೆ ವಾರಕ್ಕೆ ಒಂದು ಅಥವಾ ಎರಡು ಬಾರಿ ವಿಶ್ವವಿದ್ಯಾನಿಲಯದ ಅಧಿಕಾರಿಯೊಂದಿಗೆ ಭೇಟಿ ನೀಡಲಾಗುವುದು ಎಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಹಿಂದಿನ ಮಾನ್ಯ ಕುಲಪತಿಗಳು ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ಮಹಿಳೆಯರ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದ್ದಾಗ, ಈ ವಿಚಾರವನ್ನು ಪತ್ರಿಕೆಗಳು ಹಾಗೂ ದೃಶ್ಯ ಮಾದ್ಯಮಗಳಲ್ಲಿ ತಪ್ಪಾಗಿ ಬಿತ್ತರಗೊಂಡಿದ್ದವು. ಆದಾಗ್ಯೂ ಈ ಭೇಟಿಯು ಜಟಿಲವಾದ ಸಮಸ್ಯೆಯಾಗಿತ್ತು. ಆ ಒಂದು ಹಿತದೃಷ್ಟಿಯಿಂದ ಸಿಂಡಿಕೇಟ್ ಸದಸ್ಯರು ಮಹಿಳಾವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡುವ ಸಂದರ್ಭವಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿ/ಸಿಬ್ಬಂದಿವರ್ಗದವರು ಕೂಡ ಭೇಟಿಗೆ ಸಹಕರಿಸಲಾಗುವುದೆಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಶೌಚಾಲಯಗಳ ಛಾಯಾಚಿತ್ರವನ್ನು ನೋಡಿದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂತಹ ಸಮಸ್ಯೆಗಳಿರುವುದು ಆಶ್ಚರ್ಯವೆನಿಸುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪನೆಯಾಗಿ 108 ವರ್ಷಗಳು

ಪೂರ್ಣಗೊಂಡಿದ್ದು, ಸಂಸ್ಥಾಪನಾ ದಿನಾಚರಣೆಯನ್ನು ಆಚರಿಸಲಾಗಿದೆ. ಆದರೆ ಇಂಜಿನಿಯರಿಂಗ್ ವಿಭಾಗದವರು ವಿದ್ಯಾರ್ಥಿನಿಲಯಗಳ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳದೆ ಇರುವುದು ಕಂಡುಬರುತ್ತಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳು ವಿಭಾಗಗಳಿಗೆ ಹಾಗೂ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡುವುದು ತಪ್ಪೇನಿಲ್ಲ. ಅದರಲ್ಲೂ ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡುವ ಮುನ್ನ ವಿಶ್ವವಿದ್ಯಾನಿಲಯದಿಂದ ಅನುಮತಿ ಪಡೆಯಬೇಕು. ಇದಕ್ಕೆ ಕೆಲವೊಂದು ನಿಯಮಗಳು ಹಾಗೂ ಷರತ್ತುಗಳಿರುತ್ತವೆ. ನಿಲಯಗಳಲ್ಲಿ ವಾಸ್ತವ್ಯವಿರುವ ವಿದ್ಯಾರ್ಥಿನಿಯರ ನಿಲಯಗಳ/ಸಂಬಂಧಪಟ್ಟ ನಿಲಯ ಪಾಲಕರುಗಳ ಗಮನಕ್ಕೆ ತಂದು ಮಹಿಳಾ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಬೇಕು. ಈ ರೀತಿ ಯಾವುದೇ ಮುನ್ಸೂಚನೆಯನ್ನು ನೀಡದೆ ಏಕಾಏಕಿ ಭೇಟಿ ನೀಡುವುದು ಯುಕ್ತವಲ್ಲವೆಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಸಮಸ್ಯೆಗಳು ಉಂಟಾದಲ್ಲಿ ವೈಯಕ್ತಿಕವಾಗಿ ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನಾ ಹಾಗೂ ಇತರೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸುತ್ತಾರೆ. ಎಲ್ಲಾ ಸಂದರ್ಭದಲ್ಲೂ ಕುಲಪತಿಗಳೇ ವಿದ್ಯಾರ್ಥಿನಿಲಯಗಳಿಗೆ ನೇರವಾಗಿ ಭೇಟಿ ನೀಡಲು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿನಿಲಯದಲ್ಲಿ ಸಮಸ್ಯೆಗಳು ಉದ್ಭವಿಸಿದಲ್ಲಿ ಸಂಬಂಧಪಟ್ಟ ವಿದ್ಯಾರ್ಥಿನಿಲಯದ ನಿಲಯಪಾಲಕರು/ಶಿಕ್ಷಕ ಸಲಹೆಗಾರರು ತಕ್ಷಣವೇ ಪರಿಹರಿಸುತ್ತಾರೆ. ಆದ್ದರಿಂದ, ಸಿಂಡಿಕೇಟ್ ಸದಸ್ಯರುಗಳು ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡುವ ಮೊದಲು ವಿಶ್ವವಿದ್ಯಾನಿಲಯದಿಂದ ಲಿಖಿತವಾಗಿ ಪೂರ್ವಾನುಮತಿ ಪಡೆಯಬೇಕು. ಮುಂದುವರಿದು ಮಾತನಾಡಿ, ವಿದ್ಯಾರ್ಥಿನಿಲಯಗಳಿಗೆ 115 ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡುವ ಬದಲು 215 ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಂಡಾಗ ಇಂತಹ ಸಮಸ್ಯೆಗಳು ಉಂಟಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಕೊಠಡಿಯಲ್ಲಿರುವ ವಿದ್ಯಾರ್ಥಿಗಳೇ ಸಹಪಾಠಿಗಳನ್ನು ಪ್ರವೇಶಾತಿ ಮಾಡಿಕೊಂಡರೆ ಕೊಠಡಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದೆಂದು ತಿಳಿಸಿವುದರಿಂದ, ನಿಗದಿತ ಪ್ರವೇಶಾತಿಗಿಂತ ಹೆಚ್ಚಿನ ಮಟ್ಟದ ಪ್ರವೇಶಾತಿಗಳಾಗುತ್ತಿವೆ. ಹಾಗೆಯೇ, ವಿದ್ಯಾರ್ಥಿನಿಲಯಗಳ ವಾರ್ಡನ್ ಆಗಿ ಕಾರ್ಯನಿರ್ವಹಿಸಲು ಇತ್ತೀಚಿನ ಸಂದರ್ಭಗಳಲ್ಲಿ ಅಧ್ಯಾಪಕರುಗಳು ನಿರಾಸಕ್ತಿ ತಾಳುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಟರಾಜು ಹೆಚ್.ಎಸ್. ಅವರು ಮಾತನಾಡಿ, ಶ್ರೀ ನಾಲ್ವಡಿ ಕೃಷ್ಣರಾಜರವರು ವಿದ್ಯಾರ್ಥಿನಿಲಯಗಳನ್ನು ಕಟ್ಟಿರುವುದು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂದು, ಆದ್ದರಿಂದ, ಕಾಲಕಾಲಕ್ಕೆ ಕೋರ್ಸ್‌ಗಳಿಗೆ ತಕ್ಕಂತೆ ವಿಭಾಗಗಳನ್ನು ಯಾವ ರೀತಿ ಕಟ್ಟಲಾಗುತ್ತದೆಯೋ, ಅದೇ ರೀತಿ ವಿದ್ಯಾರ್ಥಿಗಳ ಸಂಖ್ಯಾಗನುಗುಣವಾಗಿ ವಿದ್ಯಾರ್ಥಿನಿಲಯಗಳು ನಿರ್ಮಾಣವಾಗಬೇಕು ಎಂದರು.

ಶ್ರೀ ಮಹದೇಶು ಅವರು ಮಾತನಾಡಿ, ವಿದ್ಯಾರ್ಥಿನಿಲಯಗಳ ಪ್ರವೇಶಾತಿ ಸಂದರ್ಭದಲ್ಲಿ 100 ವಿದ್ಯಾರ್ಥಿಗಳು ಅಧಿಕೃತವಾಗಿ ಪ್ರವೇಶಾತಿ ಹೊಂದಿದ್ದರೆ, ಹೆಚ್ಚುವರಿಯಾಗಿ 100-150 ವಿದ್ಯಾರ್ಥಿಗಳು ಅತಿಥಿಗಳಾಗಿ ವಾಸ ಮಾಡುತ್ತಿದ್ದಾರೆ. 100 ವಿದ್ಯಾರ್ಥಿಗಳಿಗೆ ಬದಲಾಗಿ 250 ವಿದ್ಯಾರ್ಥಿಗಳಿಗೆ ಅಡುಗೆ ಮಾಡಿದಾಗ, ಆಹಾರದ ಗುಣಮಟ್ಟವು ಕಡಿಮೆಯಾಗುತ್ತದೆ. ಈ ರೀತಿಯಾಗದಂತೆ ಆಹಾರದ ಗುಣಮಟ್ಟವನ್ನು ಹಾಗೂ ಅನಧಿಕೃತವಾಗಿ ವಾಸವಿರುವ ವಿದ್ಯಾರ್ಥಿಗಳನ್ನು ತಡೆಗಟ್ಟಲು ಒಂದು ಸಮಿತಿಯನ್ನು ರಚಿಸಬಹುದು ಅಥವಾ ಸಹಾಯಕ ವಾರ್ಡನ್‌ಗಳು ಅಥವಾ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಜಾರಿಗೊಳಿಸಬಹುದೆಂದರು. ನಿಯಮಾನುಸಾರ ಯಾವ ವಿದ್ಯಾರ್ಥಿ ಪ್ರವೇಶಾತಿಯಾಗಬೇಕೋ ಅಂತಹ ಮಕ್ಕಳ ಹಕ್ಕು ಹಾಗೂ ಪೋಷ್ಟಿಕಾಂಶವನ್ನು ಕಸಿದುಕೊಳ್ಳುತ್ತಿದ್ದೇವೆ ಎಂದೆನಿಸುತ್ತಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಡಾ. ಬಸವರಾಜು .ಸಿ ಅವರು ಮಾತನಾಡಿ, ಈ ಸಂಬಂಧ ಒಂದು ಸಮಿತಿಯನ್ನು ರಚಿಸಿ, ಮುಂದಿನ ಶೈಕ್ಷಣಿಕ ಸಾಲಿನಿಂದಲೇ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಸಮಸ್ಯೆಗಳನ್ನು ಸರಿಪಡಿಸಲು ಕ್ರಮವಹಿಸಬಹುದು. ಖಡಾಖಂಡಿತವಾಗಿ ಪ್ರವೇಶಾತಿ ಪಡೆದಿರುವಂತಹ ವಿದ್ಯಾರ್ಥಿಗಳಿಗೆ ಅಂದರೆ ಲಭ್ಯವಿರುವಂತಹ ಕೊಠಡಿಗಳಗನುಸಾರವಾಗಿ ಮಾತ್ರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಮಾಡಿಕೊಳ್ಳಬೇಕು. ಹೆಚ್ಚುವರಿ ವಿದ್ಯಾರ್ಥಿಗಳನ್ನು ಅಥವಾ ಅನಧಿಕೃತವಾಗಿ ವಾಸಿಸುತ್ತಿರುವವರಿಗೆ ಯಾವುದೇ ಕಾರಣಕ್ಕೂ ವಿದ್ಯಾರ್ಥಿನಿಲಯಗಳಲ್ಲಿ ನೆಲೆಸಲು ಆಸ್ಪದ ನೀಡಬಾರದು. ಇವುಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಕ್ರಮ ತೆಗೆದುಕೊಳ್ಳದಿದ್ದಲ್ಲಿ ಯಾವ ವಿದ್ಯಾರ್ಥಿಗೆ ನ್ಯಾಯಯುತವಾಗಿ ಪ್ರವೇಶಾತಿ ನೀಡಬೇಕೋ ಆ ವಿದ್ಯಾರ್ಥಿಗೆ ನ್ಯಾಯ ದೊರಕಿಸಿದಂತಾಗುವುದಿಲ್ಲ. ಎಂತಹುದೇ ಒತ್ತಡಗಳು ಬಂದರೂ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳುವುದನ್ನು ನಿಲ್ಲಿಸಬಾರದು. ಇದರಿಂದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿದಂತಾಗುತ್ತದೆ ಎಂದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಒಬ್ಬ ಸಿಂಡಿಕೇಟ್ ಸದಸ್ಯರು, ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಒಬ್ಬ ಅಧಿಕಾರಿ ಹಾಗೂ ಪೋಲೀಸ್ ಇಲಾಖೆಯಿಂದ ಒಬ್ಬರನ್ನು ಸದಸ್ಯರನ್ನಾಗಿಯೂ ಒಂದು ಸಮಿತಿಯನ್ನು ರಚಿಸಿ, ಜೊತೆಗೆ ಪೋಲೀಸ್ ಅಧಿಕಾರಿಗಳ ಸಹಯೋಗದೊಂದಿಗೆ ವಿದ್ಯಾರ್ಥಿನಿಲಯಗಳಿಗೆ ಭೇಟಿ ನೀಡಿ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶ ಪಡೆಯದೇ ಅನಧಿಕೃತವಾಗಿ ವಾಸ್ತವ್ಯ ಹೂಡಿರುವ ವಿದ್ಯಾರ್ಥಿಗಳನ್ನು ಹೊರಹಾಕಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

ಈ ಪ್ರಸ್ತಾವನೆಗೆ ಸದಸ್ಯರೆಲ್ಲರೂ ಸಮ್ಮತಿಯನ್ನು ಸೂಚಿಸಿ, ಆದಷ್ಟು ಶೀಘ್ರವಾಗಿ ಈ ವಿಷಯವಾಗಿ ಕಾರ್ಯೋನ್ಮುಖರಾಗುವಂತೆ ಕುಲಪತಿಯವರಲ್ಲಿ ಭಿನ್ನವಿಸಿದರು.

3. ಶ್ರೀ ನಟರಾಜು .ಹೆಚ್.ಎಸ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವುದರ ಸಂಬಂಧ ಏನು ಕ್ರಮ ವಹಿಸಲಾಗಿದೆಯೆಂದು ಸಭೆಯಲ್ಲಿ ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮತ್ತು ಕುಲಸಚಿವರು ಪ್ರತಿಕ್ರಿಯಿಸಿ, ಈ ಸಂಬಂಧ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಅನುಮೋದನೆ ಕೋರಿ ಹಲವಾರು ಬಾರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ಹಲವು ಬಾರಿ ಸರ್ಕಾರಕ್ಕೆ ಬ್ಯಾಕ್‌ಲಾಗ್ ಹುದ್ದೆ ಭರ್ತಿಮಾಡಲು ಅನುಮತಿ ಕೋರಿ ಪತ್ರ ವ್ಯವಹರಿಸಲಾಗುತ್ತಿದೆ. ಸರ್ಕಾರವು ಅನುಮೋದನೆ ನೀಡಿದ್ದಲ್ಲಿ, ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುವುದೆಂದು ತಿಳಿಸಿದರು.

4. **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ಮತ್ತು ನಗದು ಬಹುಮಾನದ ದತ್ತಿಯನ್ನು ಸ್ಥಾಪಿಸುವ ಬಗ್ಗೆ.**

ಶ್ರೀ ನಾಗರಾಜು .ಸಿ ರವರು ಮಾತನಾಡಿ, ದತ್ತಿ ಸ್ಥಾಪನೆ ಮಾಡಲು ಎಷ್ಟು ಮೊತ್ತವನ್ನು ಠೇವಣಿಯಾಗಿಡಬೇಕೆಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ, ನಗದು ಬಹುಮಾನದ ದತ್ತಿ ಸ್ಥಾಪನೆಗೆ ಕನಿಷ್ಠ ರೂ.50,000/-ಗಳನ್ನು ಮತ್ತು ಚಿನ್ನದ ಪದಕ ದತ್ತಿ ಸ್ಥಾಪನೆಗೆ ಕನಿಷ್ಠ ರೂ. 1,00,000/-ಗಳನ್ನು ನಿಗಧಿಪಡಿಸಲಾಗಿದೆಯೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ರವರು ಮಾತನಾಡಿ, ದತ್ತಿ ಸ್ಥಾಪನೆ ಮಾಡಿರುವ ದಾನಿಗಳನ್ನು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವಕ್ಕೆ ಆಹ್ವಾನ ನೀಡಲಾಗುತ್ತಿದೆಯೇ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರತಿ ವರ್ಷವೂ ದತ್ತಿಯ ದಾನಿಗಳಿಗೆ ಘಟಿಕೋತ್ಸವದಲ್ಲಿ ಭಾಗವಹಿಸುವಂತೆ ಆಹ್ವಾನ ಪತ್ರಿಕೆ ತಲುಪಿಸಲಾಗುತ್ತಿದೆಯೆಂದು ತಿಳಿಸಿದರು.

ಮುಂದುವರಿದು, ಮಾತನಾಡಿದ ಮಾನ್ಯ ಕುಲಪತಿಗಳು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಿಂದಿನಿಂದಲೂ ಕನಿಷ್ಠ ರೂ.10,000/- ದಿಂದ 1,00,000/-ದವರೆಗೆ ದಾನಿಗಳು ದತ್ತಿ ಸ್ಥಾಪನೆಗೆ ಠೇವಣಿಯಿರಿಸಿರುತ್ತಾರೆ. ಆದರೆ, ಪ್ರಸ್ತುತ ದಿನದಲ್ಲಿ ರೂ. 10,000/- ದಿಂದ 1,00,000/-ದವರೆಗೆ ಠೇವಣಿಗಳಿಗೆ ಕ್ರೋಢೀಕೃತವಾಗುವ ಬಡ್ಡಿಯ ಮೊತ್ತವು ಬಹಳ ಕಡಿಮೆಯಾಗುತ್ತಾ ಬಂದಿದೆ ಎಂದು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ದತ್ತಿಯ ಮೂಲಧನಕ್ಕೆ ಕ್ರೋಢೀಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದಾನಿಗಳು ದತ್ತಿಯ ಷರತ್ತಿನಲ್ಲಿ ತಿಳಿಸಿರುವಂತೆ ಚಿನ್ನದ ಪದಕ ಅಥವಾ ನಗದು ಬಹುಮಾನವನ್ನು ಪ್ರದಾನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಕೆಲವು ದಾನಿಗಳು ಬಹಳ ವರ್ಷಗಳ ಹಿಂದೆ ರೂ.10,000/-ಗಳ ಠೇವಣಿಯನ್ನಿರಿಸಿದ್ದು, ಸದರಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಮೊತ್ತದಲ್ಲಿ ನಗದು ಬಹುಮಾನವನ್ನು ಸಹ ನೀಡಲು ಸಾಧ್ಯವಾಗುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಟರಾಜು ಹೆಚ್.ಎಸ್ ಅವರು ಮಾತನಾಡಿ, ಡಾ. ಸಿ. ಬಸವರಾಜು ಚಿನ್ನದ ಪದಕವನ್ನು ಸ್ಥಾಪಿಸಿರುವ ದಾನಿಗಳ ಹೆಸರಿನಲ್ಲಿ ಪ್ರೊ. ಎಂ.ಎಸ್. ಬೆಂಜಮಿನ್ ಎಂದು ತಿಳಿಸಿದೆ. ಆದರೆ, ಪ್ರೊ. ಕೆ. ಗೋಪಾಲ ಮರಾಠೆ ಚಿನ್ನದ ಪದಕದಲ್ಲಿ ದಾನಿಗಳ ಹೆಸರು ಸಂಶೋಧನಾ ವಿದ್ಯಾರ್ಥಿಗಳು, ಜೀವಾಣುಶಾಸ್ತ್ರ ಮತ್ತು ಅಣು ಜೀವಾಣುಶಾಸ್ತ್ರ ಅಧ್ಯಯನ ವಿಭಾಗವೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ಡಾ. ಸಿ. ಬಸವರಾಜು ಅವರ ಹೆಸರಿನಲ್ಲಿ ಸ್ಥಾಪಿಸಿರುವ ದತ್ತಿಯಲ್ಲಿ ಪ್ರೊ. ಎಂ.ಎಸ್. ಬೆಂಜಮಿನ್ ಅವರೇ ದಾನಿ ಎಂದು ತಿಳಸಲಾಗಿರುತ್ತದೆ. ಹಾಗಾದರೆ ಈ ದತ್ತಿಯನ್ನು ಸ್ಥಾಪಿಸಿದವರು ಪ್ರೊ. ಎಂ.ಎಸ್. ಬೆಂಜಮಿನ್ ಅವರೇ ಎಂದು ಪ್ರಶ್ನಿಸಿದರು.

ಕುಲಸಚಿವ (ಪರೀಕ್ಷಾಂಗ) ರವರು ಮಾತನಾಡಿ, ಡಾ. ಸಿ. ಬಸವರಾಜು ಇವರ ಅಭಿನಂದನಾ ಸಮಿತಿಯ ಅಧ್ಯಕ್ಷರಾಗಿದ್ದರಿಂದ ಪ್ರೊ. ಎಂ.ಎಸ್. ಬೆಂಜಮಿನ್ ಅವರ ಹೆಸರು ನಮೂದಾಗಿರುತ್ತದೆಯೇ ಹೊರತು, ಚಿನ್ನದ ಪದಕವನ್ನು ಪ್ರದಾನ ಮಾಡುವ ಸಂದರ್ಭದಲ್ಲಿ ಪ್ರೊ. ಸಿ. ಬಸವರಾಜು ಚಿನ್ನದ ಪದಕ ಎಂದೇ ಪ್ರದಾನ ಮಾಡಲಾಗುವುದೆಂದು ಮನವರಿಕೆ ಮಾಡಿಕೊಟ್ಟರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಬ್ಯಾಂಕ್‌ಗಳಲ್ಲಿ ಠೇವಣಿಯಿರಿಸಿರುವ ದತ್ತಿಗಳಿಗೆ ದಿನ ಕಳೆದಂತೆ ಬಡ್ಡಿಯ ಮೊತ್ತವು ಇಳಿಕೆಯಾಗುತ್ತಿದೆ. ಹಾಗೆಯೇ ಬಡ್ಡಿಯ ಮೊತ್ತದ ಶೇ.20 ರಷ್ಟನ್ನು ಮೂಲಧನಕ್ಕೆ ಸೇರ್ಪಡೆಗೊಳಿಸಿ, ಉಳಿದ ಶೇ.80ರಷ್ಟು ಬಡ್ಡಿಯ ಮೊತ್ತವನ್ನು ಮಾತ್ರ ಚಿನ್ನದ ಪದಕ ಹಾಗೂ ನಗದು ಬಹುಮಾನವನ್ನು ನೀಡಲು ವಿನಿಯೋಗಿಸುತ್ತಿರುವುದರಿಂದ ಸದರಿ ಮೊತ್ತ ಸಾಕಾಗುವುದೇ? ಇಲ್ಲವಾದಲ್ಲಿ ಠೇವಣಿಯಿರಿಸುವ ಮೊತ್ತವನ್ನು ಒಂದು ಲಕ್ಷದಿಂದ ಒಂದುವರೆ ಲಕ್ಷಕ್ಕೆ ಪರಿಷ್ಕರಿಸುವುದು ಉಚಿತವೆಂದು ಸಲಹೆ ನೀಡಿದರು.

ಶ್ರೀ ಗೋಕುಲ್ ಗೋವರ್ಧನ್ ಅವರ ಸಲಹೆಗೆ ದನಿಗೂಡಿಸಿದ ಸದಸ್ಯರುಗಳು ನಗದು ಬಹುಮಾನಕ್ಕೆ ಠೇವಣಿಯಿಡುವ ಮೊತ್ತವನ್ನು ಕನಿಷ್ಠ ರೂ.50,000/- ದಿಂದ ರೂ.1,00,000/-ಕ್ಕೆ ಮತ್ತು ಚಿನ್ನದ ಪದಕಕ್ಕಾಗಿ ದತ್ತಿಯನ್ನು ಸ್ಥಾಪಿಸುವ ಠೇವಣಿಯ ಮೊತ್ತ ಕನಿಷ್ಠ ರೂ.1,00,000/- ದಿಂದ ರೂ. 2,00,000/-ಕ್ಕೆ ಪರಿಷ್ಕರಿಸಿ ನಿಗದಿಪಡಿಸಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.

5. ದಿನಾಂಕ: 20-06-2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಾತೃ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮಂಡ್ಯ, ಹಾಸನ ಮತ್ತು ಚಾಮರಾಜನಗರ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಲ್ಲಿ ಹಾಸನ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಪ್ರೊ. ಬಿ. ಮಹದೇವಪ್ಪ ಇವರು ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯ ನಿಕಾಯದ ಡೀನರಾಗಿ ಹಾಗೂ ಪ್ರೊ. ಎಂ.ಜಿ. ಮಂಜುನಾಥ ಇವರು ಮೈಸೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಮುಂದುವರೆದು ಹಾಸನ ಮತ್ತು ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ಪ್ರಾಧ್ಯಾಪಕರುಗಳು ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ಮಂಡಳಿಗಳ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಪ್ರಾಧ್ಯಾಪಕರುಗಳು ವಿಭಜನೆಗೊಂಡ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡೀನರುಗಳಾಗಿ ಹಾಗೂ ಅಧ್ಯಯನ ಮಂಡಳಿಗಳ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿರುವವರನ್ನು ಸದರಿ ಹುದ್ದೆಗಳಿಂದ ಬಿಡುಗಡೆಗೊಳಿಸಿ, ಮಾತೃ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳನ್ನು ಸದರಿ ಹುದ್ದೆಗಳಿಗೆ ನೇಮಕ ಮಾಡುವುದರ ಸಂಬಂಧ ಈಗಾಗಲೇ ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಸಮ್ಮತಿಸಿರುತ್ತದೆ.

ಮೇಲಿನ ನಿರ್ಣಯದನ್ವಯ ಅನುಪಾಲನಾ ವರದಿಯನ್ನು ಸ್ಥಿರೀಕರಿಸುವ ಸಂದರ್ಭದಲ್ಲಿ ದಿನಾಂಕ: 20-06-2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಅನುಪಸ್ಥಿತರಾಗಿದ್ದ ಡಾ. ಟಿ.ಆರ್. ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು ಅವರು ಈ ಮೇಲಿನ ನಿರ್ಣಯಕ್ಕೆ ದಿನಾಂಕ: 30.07.2024 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಈ ಕೆಳಕಂಡಂತೆ ಲಿಖಿತ ರೂಪದಲ್ಲಿ ಅಸಮ್ಮತಿಯನ್ನು ಸಲ್ಲಿಸಿರುತ್ತಾರೆ.

**"ಪ್ರೊ. ಬಿ. ಮಹದೇವಪ್ಪ, ವಾಣಿಜ್ಯ ನಿಕಾಯದ ಹಾಗೂ ಪ್ರೊ. ಎಂ.ಜಿ. ಮಂಜುನಾಥ, ಕಲಾ ನಿಕಾಯದ ಡೀನರು ಇವರುಗಳು ಹಾಸನ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಡೀನರಾಗಿ ಮುಂದುವರೆದಿದ್ದು ಹಾಗೂ ವಿವಿಧ ಅಧ್ಯಯನ ಮಂಡಳಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರತ್ಯೇಕಿಸಲ್ಪಟ್ಟ ಮೂರು ನೂತನ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರುಗಳು ಅಧ್ಯಯನ ಮಂಡಳಿಗಳ ಅಧ್ಯಕ್ಷರಾಗಿ ಮುಂದುವರಿದಿರುವುದನ್ನು ಹಿಂಪಡೆದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳನ್ನೇ ಡೀನರು ಹಾಗೂ ಅಧ್ಯಯನ ಮಂಡಳಿಗಳ ಅಧ್ಯಕ್ಷರನ್ನಾಗಿ ನೇಮಕ ಮಾಡಿಕೊಳ್ಳಲು ದಿನಾಂಕ : 20-06-2024ರಂದು ನಡೆದ ಸಿಂಡಿಕೇಟ್ ಸಭೆಯು ಅನುಮೋದಿಸಿರುವುದಕ್ಕೆ ಅಸಮ್ಮತಿಯನ್ನು ನೀಡಿರುತ್ತಾರೆ."**

ದಿನಾಂಕ 13-10-2023ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಹಾಸನ ಮತ್ತು ಮಂಡ್ಯ ವಿಶ್ವವಿದ್ಯಾನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳು ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳೇ. ಸದರಿ ಅಧ್ಯಾಪಕರುಗಳಿಗೆ ಹೆಚ್‌ಆರ್‌ಎಂಎಸ್ ತಂತ್ರಾಂಶದ ಮೂಲಕ ಮೈಸೂರು ವಿಶ್ವವಿದ್ಯಾನಿಲಯವೇ ವೇತನ ಪಾವತಿ ಮಾಡಲಾಗುತ್ತಿದೆಯೆಂದು ಕುಲಪತಿಗಳು, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಸಿಂಡಿಕೇಟ್ ಸಭೆಗೆ ಮನವರಿಕೆ ಮಾಡಿಕೊಟ್ಟಿದ್ದು ಸದರಿ ಅಧ್ಯಾಪಕರುಗಳು ನೂತನ ವಿಶ್ವವಿದ್ಯಾನಿಲಯ ರಚನೆಯ ನಂತರ ಮೈಸೂರು ವಿಶ್ವವಿದ್ಯಾನಿಲಯವನ್ನು ಸೇರಲು ಅಭಿಮತವನ್ನು ನೀಡಿರುವುದು ಸರಿಯಷ್ಟೆ. ಸದರಿ ಅಭಿಮತದ ಕುರಿತು ಸರ್ಕಾರದಿಂದ ಯಾವುದೇ ಸ್ಪಷ್ಟ ಆದೇಶ ಬಾರದೆ ಇರುವುದರಿಂದ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಡೀನರ ಹುದ್ದೆಯಿಂದ ಬಿಡುಗಡೆಗೊಳಿಸಬಾರದೆಂದು ಡಾ. ಟಿ.ಆರ್. ಚಂದ್ರಶೇಖರ್‌ರವರು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಈ ಸಂಬಂಧ ಮಾತನಾಡಿ, ಮಾತೃ ವಿಶ್ವವಿದ್ಯಾನಿಲಯವಾದ ಮೈಸೂರು ವಿಶ್ವವಿದ್ಯಾನಿಲಯದಿಂದ ಮಂಡ್ಯ, ಹಾಸನ ಹಾಗೂ ಚಾಮರಾಜನಗರ ಸ್ನಾತಕೋತ್ತರ ಕೇಂದ್ರಗಳನ್ನು ಪ್ರತ್ಯೇಕಿಸಿ, ನೂತನ ವಿಶ್ವವಿದ್ಯಾನಿಲಗಳನ್ನು ರೂಪಿಸುವ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅಂದರೆ, ಮೈಸೂರು ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳು ನೂತನ ವಿಶ್ವವಿದ್ಯಾನಿಲಯಗಳಿಗೆ ತೆರಳಲು ಇಚ್ಛಿಸಿದ್ದರೆ ಮಾತ್ರ ಅಭಿಮತ ಸಲ್ಲಿಸಲು ಅವಕಾಶ ನೀಡಿದ್ದು, ಹಾಸನ ಮತ್ತು ಮಂಡ್ಯ ಸ್ನಾತಕೋತ್ತರ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರುಗಳು ಸದರಿ ಕೇಂದ್ರಗಳಿಗೆ ಮಂಜೂರಾಗಿರುವ ಹುದ್ದೆಗಳಿಗೆ ಎದುರಾಗೆ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ ಅಧ್ಯಾಪಕರಾಗಿರುತ್ತಾರೆ. ಮುಂದುವರೆದು, ಅಭಿಮತ ನೀಡಿರುವ ಪ್ರಾಧ್ಯಾಪಕರುಗಳ ಮಾಹಿತಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಈ ವಿಷಯದ ಕುರಿತು ಇದುವರೆವಿಗೂ ಯಾವುದೇ ನಿರ್ದೇಶನವನ್ನು ನೀಡಿರುವುದಿಲ್ಲ. ಮೇಲಾಗಿ ಈಗಾಗಲೇ ಸದರಿ ವಿಶ್ವವಿದ್ಯಾನಿಲಯಗಳಲ್ಲಿ ಮೊದಲನೇ ವರ್ಷದ ಪದವಿ ಹಾಗೂ ಸ್ನಾತಕೋತ್ತರ ತರಗತಿಗಳನ್ನು ನಡೆಸುತ್ತಿದ್ದು ಒಂದು ವರ್ಷವೇ ಕಳೆದುಹೋಗಿದೆ. ಹೀಗಿದ್ದರೂ ಸಹ ಸರ್ಕಾರದಿಂದ ಯಾವುದೇ ಸ್ಪಷ್ಟ ನಿರ್ದೇಶನ ಬಾರದೆ ಇರುವುದರಿಂದ ದಿನಾಂಕ 20-06-2024ರಂದು ತೆಗೆದುಕೊಂಡಿರುವ ನಿರ್ಣಯವು ಶೈಕ್ಷಣಿಕ ದೃಷ್ಟಿಯಿಂದ ಬದಲಾವಣೆ ಮಾಡುವ ಅಗತ್ಯ ಹಾಗೂ ಅನಿವಾರ್ಯವೆಂದು ಸಭೆಯ ಗಮನಕ್ಕೆ ತಂದರು.

ಡೀನರುಗಳ ನೇಮಕಾತಿ ಕುರಿತು ಶ್ರೀ ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಈಗಾಗಲೇ ದಿನಾಂಕ 13-10-2023ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪ್ರೊ. ಎಂ.ಜಿ. ಮಂಜುನಾಥ, ಪ್ರಾಧ್ಯಾಪಕರು, ಹಾಸನ ವಿಶ್ವವಿದ್ಯಾನಿಲಯ, ಹಾಸನ ಇವರನ್ನು ಮೈಸೂರು ವಿಶ್ವವಿದ್ಯಾನಿಲಯದ ಕಲಾ ನಿಕಾಯದ ಡೀನರನ್ನಾಗಿ ನೇಮಿಸಲಾಗಿದ್ದು, ಕಲಾ ನಿಕಾಯದ ಡೀನರನ್ನಾಗಿ ನೇಮಿಸಲು ನಿರ್ಣಯಿಸಿ, ದಿನಾಂಕ 20-06-2024ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಕಲಾ ನಿಕಾಯದ ಡೀನರ ಹುದ್ದೆಯಿಂದ ಬಿಡುಗಡೆಗೊಳಿಸುವುದು ಎಷ್ಟು ಸರಿ ಇದೆ. ಈ ರೀತಿ ಎರಡೆರಡು ನಿರ್ಣಯವನ್ನು ತೆಗೆದುಕೊಂಡಂತಾಗುವುದಿಲ್ಲವೇ ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ, 104ನೇ ಘಟಿಕೋತ್ಸವವನ್ನು ಆಯೋಜಿಸುವ ಸಂದರ್ಭದಲ್ಲಿ ಡೀನರ ಅವಶ್ಯಕತೆ ಬಹಳ ಇರುತ್ತದೆ ಹಾಗೂ ಅಭಿಮತವನ್ನು ಸಲ್ಲಿಸಿದ ಪ್ರಾಧ್ಯಾಪಕರ ಕುರಿತು ಆ ದಿನಗಳಲ್ಲಿ ಸರ್ಕಾರದಿಂದ ಯಾವುದೇ ಸ್ಪಷ್ಟ ನಿರ್ದೇಶನ ಇಲ್ಲದೆ ಇದ್ದುದರಿಂದಲೂ ಘಟಿಕೋತ್ಸವವನ್ನು ನಡೆಸುವ ದೃಷ್ಟಿಯಿಂದ ಸರ್ಕಾರವು ನೀಡುವ ನಿರ್ದೇಶನದಂತೆ ಎಂಬ ಷರತ್ತನ್ನು ವಿಧಿಸಿ ಪ್ರೊ. ಎಂ.ಜಿ. ಮಂಜುನಾಥ ಇವರನ್ನು ಕಲಾ ನಿಕಾಯದ ಡೀನರನ್ನಾಗಿ ನೇಮಕ ಮಾಡಲಾಗಿರುತ್ತದೆ ಎಂದು ತಿಳಿಸಿದರು.

ಈ ಮೇಲಿನ ಎಲ್ಲಾ ಚರ್ಚೆಗಳನ್ನು ಆಲಿಸಿದ ಸಿಂಡಿಕೇಟ್ ಸಭೆಯು ಈ ಕೆಳಗಿನಂತೆ ತೀರ್ಮಾನಿಸಿತು.

**ಡಾ. ಟಿ.ಆರ್. ಚಂದ್ರಶೇಖರ್ ಇವರನ್ನು ಹೊರತುಪಡಿಸಿ, ದಿನಾಂಕ: 20-06-2024ರಂದು ತೆಗೆದುಕೊಂಡ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಉಳಿದೆಲ್ಲ ಸದಸ್ಯರ ಸಹಮತಿಯೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳನ್ನೇ ಡೀನರನ್ನಾಗಿ ನೇಮಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.**

6. ಶ್ರೀ ನಟರಾಜು .ಹೆಚ್.ಎಸ್ ರವರು ಮಾತನಾಡಿ, ಶ್ರೀ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಪ್ರೊ. ಮಹಾದೇವಿ ಇವರನ್ನು ಆಹ್ವಾನಿಸಲು ದಿನಾಂಕ: 20-06-2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ

ನಿರ್ಣಯಿಸಲಾಗಿತ್ತು. ಆದರೆ, ಅವರ ಬದಲು ಡಾ. ಎನ್. ಸರಸ್ವತಿ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವುದಕ್ಕೆ ಸ್ಪಷ್ಟೀಕರಣ ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಮಹಾದೇವಿ ಇವರು ಈಗಾಗಲೇ ಟಿಪ್ಪು ಸುಲ್ತಾನ್ ಅಧ್ಯಯನ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ, ಡಾ. ಎನ್.ಸರಸ್ವತಿ ಇವರನ್ನು ಶ್ರೀ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಮಾಜಿಕ ಅಭಿವೃದ್ಧಿ ಕೇಂದ್ರಕ್ಕೆ ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

7. ಡಾ. ವಿಶ್ವನಾಥ, ನಿವೃತ್ತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ನಿಯೋಜನೆ ಮೇರೆಗೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು "ಲೀನ್" ೦2 ವರ್ಷಕ್ಕೆ ಅನುಮತಿ ಪಡೆದು, ಮೂರನೇ ವರ್ಷದ ಅನಧಿಕೃತವಾಗಿ ಗೈರುಹಾಜರಾಗಿರುವ ಅವಧಿಯನ್ನು ಕೆ.ಸಿ.ಎಸ್.ಆರ್ ನಿಯಮ 106(ಎ) ಅನ್ವಯ ವೇತನರಹಿತ ರಜೆಯೆಂದು ಪರಿಗಣಿಸಿ ದಿನಾಂಕ: 20-06-2024ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿರುವುದನ್ನು ಪ್ರಶ್ನಿಸಿ ಡಾ. ವಿಶ್ವನಾಥ ಅವರು ಸದರಿ ಅವಧಿಯಲ್ಲಿ ಜೆಎನ್‌ಯು ವಿಶ್ವವಿದ್ಯಾನಿಲಯದಲ್ಲಿ ವೇತನವನ್ನು ಪಡೆದು ಕೆಲಸ ನಿರ್ವಹಿಸಿರುವುದರಿಂದ, ಆ ಅವಧಿಯ ಅವರ ಗೈರುಹಾಜರಿಯನ್ನು ವೇತನರಹಿತ ರಜೆಯೆಂದು ಘೋಷಣೆ ಮಾಡಲು ಸಾಧ್ಯವಿರುವುದಿಲ್ಲ. ಯಾವುದೇ ಪ್ರಾಧ್ಯಾಪಕರು ವರ್ಷಗಟ್ಟಲೆ ಗೈರುಹಾಜರಾಗಿ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ನಿರ್ವಹಿಸಿ ವೇತನ ಪಡೆಯಬಹುದೇ? ಇದನ್ನು ಸಕ್ರಮ ಮಾಡಲು ಸಾಧ್ಯವೇ, ನನಗೆ ತಿಳಿದಿರುವ ಮಾಹಿತಿಯ ಪ್ರಕಾರ ಡಾ. ವಿಶ್ವನಾಥ ಇವರು ಜೆಎನ್‌ಯು ವಿಶ್ವವಿದ್ಯಾನಿಲಯದಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿದಾಗ, ಜೆಎನ್‌ಯು ವಿಶ್ವವಿದ್ಯಾನಿಲಯದಿಂದ ಬಿಡುಗಡೆ ಪತ್ರವನ್ನು ಸಹ ಪಡೆಯದೇ ಹಿಂದಿರುಗಿರುತ್ತಾರೆ. ಈ ಎಲ್ಲಾ ಅಂಶಗಳನ್ನು ವಿಚಾರಣಾ ಸಮಿತಿಯ ಓರ್ವ ಸದಸ್ಯನಾಗಿ ತಿಳಿದುಕೊಂಡಿರುತ್ತೇನೆ. ಹಾಗಾಗಿ ಡಾ. ವಿಶ್ವನಾಥ ಇವರು ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಜೆಎನ್‌ಯು ವಿಶ್ವವಿದ್ಯಾನಿಲಯಗಳಿಗೆ ವಂಚಿಸಿರುತ್ತಾರೆ. ಇವರು ಮಾಡಿರುವ ತಪ್ಪುಗಳನ್ನು ಕ್ಷಮಿಸಲು ಸಾಧ್ಯವಿಲ್ಲ. ಇಂತಹವರುಗಳ ವಿರುದ್ಧ ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಮುಖೇನ ಇಲಾಖಾ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ತಿಳಿಸಿ, ಈ ಹಿಂದೆ ಡಾ. ವಿಶ್ವನಾಥ ಇವರ ಪ್ರಕರಣದ ಸಂಬಂಧ ವಿಶ್ವವಿದ್ಯಾನಿಲಯದ ವತಿಯಿಂದ ರಚಿಸಲಾಗಿದ್ದ ಸಮಿತಿ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವುದು ಸೂಕ್ತವೆಂದು ಡಾ. ಟಿ.ಆರ್. ಚಂದ್ರಶೇಖರ್ ಅವರು ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಈ ರೀತಿಯ ಯಾವುದಾದರೂ ಪ್ರಕರಣಗಳು ವಿಶ್ವವಿದ್ಯಾನಿಲಯದಲ್ಲಿ ಜರುಗಿದ್ದಲ್ಲಿ, ಅಂತಹ ಸಂದರ್ಭಗಳಲ್ಲಿ ವಿಚಾರಣಾ ಸಮಿತಿಗಳನ್ನು ಆಯೋಜಿಸುವುದರ ಬದಲು ನೇರವಾಗಿ ನಿವೃತ್ತ ಜಿಲ್ಲಾ ಸೆಷನ್ಸ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಇಲಾಖಾ ವಿಚಾರಣೆಯನ್ನು ರಚಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

8. ಶ್ರೀ ಸಿ. ನಾಗರಾಜು ಮತ್ತು ಶ್ರೀ ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಡಾ. ದಿವಾಕರ್ ಸಿ. ಚಾಂಡಿ, ಸಹ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ ಮತ್ತು ಪ್ರೊ. ಗೋಪಾಲ್‌ರಾಜ್, ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರುಗಳು ಯಾವುದೇ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಹಲವಾರು ವಿದ್ಯಾರ್ಥಿಗಳು ಸಂಶೋಧನೆ ಮಾಡಲು ಮಾರ್ಗದರ್ಶಕರಿಲ್ಲದೆ ತೊಂದರೆ ಅನುಭವಿಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ಡಾ. ದಿವಾಕರ್ ಸಿ. ಚಾಂಡಿ ಇವರಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸುತ್ತಿರುವಂತೆ ಲಿಖಿತವಾಗಿ ಸೂಚನೆಯನ್ನು ನೀಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಪ್ರೊ. ಗೋಪಾಲ್ ರಾಜ್ ಇವರು ಈಗಾಗಲೇ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವಂತೆ ಡಾ. ದಿವಾಕರ್ ಸಿ. ಚಾಂಡಿ ಇವರಿಗೆ ಈಗಾಗಲೇ ಮೌಖಿಕವಾಗಿ ಸೂಚನೆಯನ್ನು ನೀಡಿರುತ್ತೇನೆಂದು ತಿಳಿಸಿದರು. ಡಾ. ದಿವಾಕರ್ ಸಿ. ಚಾಂಡಿ ಇವರು ಬೇರೊಂದು ವಿಶ್ವವಿದ್ಯಾನಿಲಯದಲ್ಲಿ ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದು, ವ್ಯಾಸಂಗ ಪೂರ್ಣಗೊಂಡ ನಂತರ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುವುದಾಗಿ ತಿಳಿಸಿರುತ್ತಾರೆಂದು ಹಾಗೂ ಈಗಾಗಲೇ ಪ್ರೊ. ಗೋಪಾಲ್ ರಾಜ್ ಇವರು ವಯೋನಿವೃತ್ತಿ ಹೊಂದಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ನಾಗರಾಜು ಸಿ. ಇವರು ಮಾತನಾಡಿ, ಪ್ರೊ. ಗೋಪಾಲ್ ರಾಜ್ ಇವರು ಯಾವುದೇ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಿ ಕರ್ತವ್ಯ ನಿರ್ವಹಿಸದೆ ಇರುವುದರಿಂದ ಇವರ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯುವಂತೆ ತಿಳಿಸಿದರು.

ಮಾನ್ಯ ಕುಲಪತಿಗಳು ಈ ಸಂಬಂಧ ಮಾತನಾಡಿ, ನಿವೃತ್ತಿ ಸೌಲಭ್ಯವು ಪ್ರೊ. ಗೋಪಾಲ್ ರಾಜ್ ಇವರಿಗೆ ಮಾತ್ರ ಸೀಮಿತವಾಗಿರುವುದಿಲ್ಲ ಅವರ ಕುಟುಂಬವನ್ನು ಒಳಗೊಂಡಂತೆ ನಿವೃತ್ತಿ ಸೌಲಭ್ಯವನ್ನು ನೀಡುತ್ತಿರುವುದರಿಂದ ಯಾವುದೇ ಹಂತದಲ್ಲಿಯೂ ನಿವೃತ್ತಿ ಸೌಲಭ್ಯಗಳನ್ನು ನಿವೃತ್ತಿಯ ನಂತರ ತಡೆಹಿಡಿಯಲು ಸಾಧ್ಯವಿಲ್ಲವೆಂದು ಸಭೆಯ ಗಮನಕ್ಕೆ ತಂದರು.

9. ದಿನಾಂಕ 20-06-2024ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ತೆಗೆದುಕೊಂಡ ಕ್ರಮದ ಕುರಿತು ಚರ್ಚಿಸುವ ಸಂದರ್ಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವನ್ನು ಸ್ಥಾಪಿಸುವ ಕುರಿತು ತೀರ್ಮಾನಿಸಲಾಗಿದೆ. ಈ ಸಂಬಂಧ ಏನು ಕ್ರಮವಹಿಸಲಾಗಿದೆ ಎಂದು ಶ್ರೀ ಸಿ. ನಾಗರಾಜು ಇವರು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ವಾಲ್ಮೀಕಿ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರವನ್ನು ಸ್ಥಾಪಿಸುವ ಕುರಿತು ಕಾನೂನು ಸಲಹೆಗಾರರ ಅಭಿಪ್ರಾಯ ಕೋರಲಾಗಿದೆ. ಮುಂದುವರೆದು, ಯಾವುದೇ ಪೀಠಗಳನ್ನು ಸ್ಥಾಪನೆ ಮಾಡಬೇಕಾದರೆ ಸರ್ಕಾರದ ಅನುಮತಿ ಕಡ್ಡಾಯವಾಗಿ ಅವಶ್ಯವಿರುತ್ತದೆ ಏಕೆಂದರೆ ಪೀಠವನ್ನು ಮುನ್ನಡೆಸಲು ಸರ್ಕಾರವು ಅನುದಾನವನ್ನು ಮಂಜೂರು ಮಾಡಬೇಕು ಹಾಗೂ ಪೀಠಗಳನ್ನು ಸ್ಥಾಪನೆ ಮಾಡುವ ಸಲುವಾಗಿ ಸರ್ಕಾರದ ಹಂತದಲ್ಲಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ನೀಡುವ ವರದಿಯನುಸಾರ ಸರ್ಕಾರವು ನೀಡುವ ನಿರ್ದೇಶನದಂತೆ ಕ್ರಮವಹಿಸಲಾಗುವುದು ಎಂದು ಸಭೆಯ ಗಮನಕ್ಕೆ ತಂದರು.

ಅಂತಿಮವಾಗಿ ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಮತ್ತು ಅಧ್ಯಕ್ಷರು